**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:-** ರಾಜ್ಯದಲ್ಲಿನ ಪಾಲಿಟೆಕ್ನಿಕ್ ಕೋರ್ಸುಗಳ ವಿದ್ಯಾರ್ಥಿ ಬೋಧನಾ ಶುಲ್ಕವನ್ನು ಪರಿಷ್ಕರಣೆ ಮಾಡುವ ಕುರಿತು.

*****

**ಓದಲಾಗಿದೆ:**

01. ಸರ್ಕಾರದ ಆದೇಶಸಂಖ್ಯೆ: ಇಡಿ 119 ಟಿಪಿಇ 2005, ದಿನಾಂಕ:18.10.2005.
02. ಸರ್ಕಾರದ ಆದೇಶ ಸಂಖ್ಯೆ: ಇಡಿ 10 ಟಿಪಿಇ 2012, ದಿನಾಂಕ:29.05.2013.
03. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಇವರ ಪತ್ರ ಸಂಖ್ಯೆ: ಡಿಟಿಇ/349/ಎಸಿಎಂ(2)/2011-12, ದಿನಾಂಕ:20.04.2016.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಸರ್ಕಾರಿ ಆದೇಶದಲ್ಲಿ ರಾಜ್ಯದ ಪಾಲಿಟೆಕ್ನಿಕ್ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಪಾವತಿಸಬೇಕಾದ ಬೋಧನಾ ಶುಲ್ಕ, ಇತರೆ ಶುಲ್ಕ ಹಾಗೂ ಅಭಿವೃದ್ಧಿ ಶುಲ್ಕವನ್ನು 2006-07ನೇ ಸಾಲಿನಿಂದ ಜಾರಿಗೆ ಬರುವಂತೆ ಪರಿಷ್ಕರಿಸಿ ಆದೇಶ ಹೊರಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಸರ್ಕಾರಿ ಆದೇಶದಲ್ಲಿ ರಾಜ್ಯದ ಪಾಲಿಟೆಕ್ನಿಕ್ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಪಾವತಿಸಬೇಕಾದ ಬೋಧನಾ ಶುಲ್ಕ, ಇತರೆ ಶುಲ್ಕವನ್ನು 2012-2013ನೇ ಸಾಲಿನಿಂದ ಜಾರಿಗೆ ಬರುವಂತೆ ಪರಿಷ್ಕರಿಸಲಾಗಿದೆ ಹಾಗೂ ಇತರೆ ಶುಲ್ಕದಡಿಯಲ್ಲಿ ಬರುವ ವಿವಿಧ ಬಾಬ್ತುಗಳಿಗೆ ಶುಲ್ಕ ನಿಗದಿ ಮತ್ತು ಅಭಿವೃದ್ಧಿ ಶುಲ್ಕಕ್ಕೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ:ಇಡಿ 119 ಟಿಪಿಇ 2005, ದಿನಾಂಕ:18-10-2005 ರಲ್ಲಿರುವುದನ್ನು ಯಥಾವತ್ತಾಗಿ ಅನ್ವಯಿಸತಕ್ಕದೆಂದು ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ತಾಂತ್ರಿಕ ಶಿಕ್ಷಣ ನಿರ್ದೇಶಕರ ಪ್ರಸ್ತಾವನೆಯಲ್ಲಿ ಕರ್ನಾಟಕ ಖಾಸಗಿ ಪಾಲಿಟೆಕ್ನಿಕ್ ಅಸೋಸಿಯೇಷನ್ ಹಾಗೂ ಇನ್ನಿತರೇ ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಗಳಿಂದ ಬೋಧನಾ, ಇತರೆ ಶುಲ್ಕ ಹಾಗೂ ಅಭಿವೃದ್ಧಿ ಶುಲ್ಕವನ್ನು ಪರಿಷ್ಕರಣೆ ಮಾಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಅದರಂತೆ ಪರಿಶೀಲಿಸಲಾಗಿ, ಸರ್ಕಾರದ ಆದೇಶ ಸಂಖ್ಯೆ: ಇಡಿ 119 ಟಿಪಿಇ 2005, ದಿನಾಂಕ:18-10-2005ರನ್ವಯ ವಾರ್ಷಿಕ ಶೇ.5 ರಷ್ಟು ಬೋಧನಾ ಶುಲ್ಕದಲ್ಲಿ ಹೆಚ್ಚಳ ಮಾಡಿದ್ದಲ್ಲಿ, 2016-17ನೇ ಶೈಕ್ಷಣಿಕ ಸಾಲಿಗೆ ನಿಗದಿಪಡಿಸಬಹುದಾದ ಪರಿಷ್ಕರಿಸಿದ ಪಾಲಿಟೆಕ್ನಿಕ್ ಕೋರ್ಸಿನ ಬೋಧನಾ ಶುಲ್ಕದಲ್ಲಿ ಆಗುವ ಹೆಚ್ಚಳದ ವಿವರಗಳೊಂದಿಗೆ ಪಾಲಿಟೆಕ್ನಿಕ್ ಸಂಸ್ಥೆಗಳ ಶುಲ್ಕ ಪರಿಷ್ಕರಣೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ತಾಂತ್ರಿಕ ಶಿಕ್ಷಣ ನಿರ್ದೇಶಕರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶಸಂಖ್ಯೆ: ಇಡಿ 64 ಟಿಪಿಇ 2016,**

**ಬೆಂಗಳೂರು, ದಿನಾಂಕ:21ನೇ ಜೂನ್ 2016.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ರಾಜ್ಯದ ಪಾಲಿಟೆಕ್ನಿಕ್ ಕೋರ್ಸುಗಳ ಬೋಧನಾ ಶುಲ್ಕವನ್ನು ಮುಂದಿನ 05 ವರ್ಷಗಳ ಅವಧಿಯವರೆಗೆ ಮತ್ತು ಬೋಧನಾ ಶುಲ್ಕದಲ್ಲಿ ಮಾತ್ರ ವಾರ್ಷಿಕ ಶೇಕಡ 05 ರಷ್ಟು ಹೆಚ್ಚಳದೊಂದಿಗೆ 2016-17ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಈ ಕೆಳಕಂಡಂತೆ ಪರಿಷ್ಕರಣೆ ಮಾಡಿ ಆದೇಶಿಸಿದೆ.

| ಕ್ರ. ಸಂ. | ಪಾಲಿಟೆಕ್ನಿಕ್‌ಗಳ ವಿವರ | 2016-17 ರಿಂದ ಜಾರಿಗೆ ಬರುವ ಬೋಧನಾ ಶುಲ್ಕ |
|---|---|---|
| 1. | ಸರ್ಕಾರಿ ಪಾಲಿಟೆಕ್ನಿಕ್‌ಗಳು | ರೂ.2,800-00 |
| 2. | ಅನುದಾನಿತ ಪಾಲಿಟೆಕ್ನಿಕ್‌ಗಳು | ರೂ.5,350-00 |
| 3. | ಆಡಳಿತ ಮಂಡಳಿ ಕೋಟಾ (ಕರ್ನಾಟಕದ ವಿದ್ಯಾರ್ಥಿಗಳಿಗೆ) | ರೂ.11,500-00 |
| 4. | ಆಡಳಿತ ಮಂಡಳಿ ಕೋಟಾ (ಹೊರ ರಾಜ್ಯಗಳ ವಿದ್ಯಾರ್ಥಿಗಳಿಗೆ) | ರೂ.18,500-00 |
| 5. | ಇತರೆ ಶುಲ್ಕ | ರೂ.800-00 |
| 6. | ಅಭಿವೃದ್ಧಿ ಶುಲ್ಕ | ರೂ.500-00 |

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ,**

S. Venkatesh

**(ಎಸ್.ವೆಂಕಟೇಶ್),**
**ಸರ್ಕಾರದ ಅಧೀನಕಾರ್ಯದರ್ಶಿ,**
**ಉನ್ನತ ಶಿಕ್ಷಣ ಇಲಾಖೆ (ತಾಂತ್ರಿಕ).**

ಗೆ,

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
2. ಕಾರ್ಯದರ್ಶಿ, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ, ಅರಮನೆ ರಸ್ತೆ, ಬೆಂಗಳೂರು
3. ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಂಶುಪಾಲರುಗಳಿಗೆ (ತಾಂತ್ರಿಕ ಶಿಕ್ಷಣ ನಿರ್ದೇಶಕರ ಮುಖಾಂತರ)
4. ಮಾಹಿತಿ ಕೇಂದ್ರ, ಶಿಕ್ಷಣ ಇಲಾಖೆ.
5. ಶಾಖಾ ರಕ್ಷಾ ಕಡತ/ಹೆಚ್ಚಿನ ಪ್ರತಿ/ಓಡಿಜಿಸಿ